ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಆ ಎಲ್ಲಾ ವಿಚಾರಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಈ ಒಂದು ಯೋಜನೆಯನ್ನು ರೂಪಿಸಿ ಮತ್ತು ನೀರಿನ ಲಭ್ಯತೆಯನ್ನೂ ಸಹ ಕಂಡುಹಿಡಿಯಲಾಗಿದೆ. ಕೋಲಾರ ಜಿಲ್ಲೆಯ ಎಲ್ಲಾ ಕಡೆ ಯಾವುದೇ ನದಿ ನೀರನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಬೇಕಾದಷ್ಟು ಕರೆಗಳಿವೆ. ಬೇತಮಂಗಲ ಕೆರೆಯಿಂದ ಕೂಡ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಡಲಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅವರು 9 ಲಕ್ಷ ರೂಪಾಯಿ ಕಟ್ಟಿದ್ದು ಒಂದೇ ಅಲ್ಲ, ಕೆಜಿಎಫ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂಥ ನಗರಸಭೆಯವರೂ ಇದರ ಬಗ್ಗೆ ಒಂದು ಗೊತ್ತುವಳಿ ಕೂಡ ಮಾಡಿದ್ದಾರೆ. ಮತ್ತೆ ಈ ಗೊತ್ತುವಳಿಯನ್ನು ಪಾಸ್ ಮಾಡಬೇಕೆಂದು ಅನೇಕ ಪತ್ರಗಳನ್ನು ಬರದಿದ್ದಾರೆ. ಆದರೂ ಕೂಡ ಅವರು ಗೊತ್ತುವಳಿಯನ್ನು ಪಾಸ್ ಮಾಡಿಲ್ಲ ಏನು ಉದ್ದೇಶ ಎನ್ನತಕ್ಕಂಥದ್ದು ಗೊತ್ತಿಲ್ಲ. ತಾವು ಹೇಳಿರತಕ್ಕಂಥ ಅನೇಕ ವಿಷಯಗಳ ಬಗ್ಗೆ ಅನಂತರ ನಮ್ಮ ಕಾರ್ಯದರ್ಶಿಯವರಿಗೆ ತಿಳಿಸುತ್ತೇನೆ. ತತ್‌ಕ್ಷಣದಲ್ಲಿಯೇ ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿ ಕೆಜಿಎಫ್ ನಗರಸಭೆಯಲ್ಲಿ ನಡೆದಿರತಕ್ಕಂಥ ಎಲ್ಲ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ಒಂದು ವಾರದೊಳಗೆ ವರದಿ ಕೊಡುವಂತೆ ನಾನು ಅಧಿಕಾರಿಗಳಿಗೆ ಹೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಇದನ್ನು ಡಿಸಾಲ್ವ್ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಅದರ ಮೇಲೆ ಕ್ರಮ ತೆಗೆದುಕೊಂಡರೆ ಸಾಕು.

ಶ್ರೀ ಎಂ.ಪಿ.ಪ್ರಕಾಶ್: ಹಾಗಾದರೆ, ಇದರ ಬಗ್ಗೆ ನಮ್ಮ ಕಾರ್ಯದರ್ಶಿಯವರಿಗೆ ತಿಳಿಸಿ, ಅದು ಎಲ್ಲಿ ಮತ್ತು ಯಾವ ಹಂತದಲ್ಲಿದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಈಗ 9 ಲಕ್ಷ ರೂಪಾಯಿ ಕೊಡತಕ್ಕಂಥದರ ಬಗ್ಗೆ ಒಂದು ಗೊತ್ತುವಳಿ ಆಗತಕ್ಕಂಥ ಕೆಲಸ ದಯಮಾಡಿ ಆಗಬೇಕಾಗಿದೆ. ಇದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಇದನ್ನು ಮಾಡಿಸತಕ್ಕಂಥ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ.ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಗಳವಾರ ದಿನಾಂಕ: 27ನೇ ಜೂನ್ 2006ರಂದು 10ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 53 ಪ್ರಶ್ನೆಗಳ ಪೈಕಿ 50 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂದ–1)

ಅಧ್ಯಕ್ಷರು ಮಂಡಿಸಲಾಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(1) ಶ್ರೀ ಎಂ.ಪಿ.ಪ್ರಕಾಶ್: ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ,

2005ರ ಮಾಹಿತ ಹಕ್ಕು ಅಧಿನಿಯಮ 24(5)ರ ಪ್ರಕರಣದ ಮೇರೆಗೆ:

ಗುಪ್ತವಾರ್ತೆ ಹಾಗೂ ರಕ್ಷಣಾ ಸಂಘಟನೆಗಳನ್ನು 2005ರ ಮಾಹಿತಿ ಹಕ್ಕು ಅಧಿನಿಯಮದ ವ್ಯಾಪ್ತಿಯಿಂದ ಹೊರತುಪಡಿಸಿ ದಿನಾಂಕ: 5.12.2005 ರಂದು ಹೊರಡಿಸಲಾದ ಡಿಪಿಎಆರ್ 44 ಆರ್‌ಟಿಐ 2004 ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(2) ಶ್ರೀ ಎಂ.ಪಿ.ಪ್ರಕಾಶ್: (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):

(ಅ) ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ ನಿಯಮಾವಳಿ 2002ರ 4ನೇ ನಿಯಮದ 2ನೇ ಉಪ ನಿಯಮಕ್ಕೆ ತಿದ್ದುಪಡಿ ಮಾಡಿ 08.05.2006 ರಂದು ಹೊರಡಿಸಿರುವ ಎಫ್‌ಡಿ 3 ಎಸ್‌ಆರ್‌ಎ 2004ನೇ ಸಂಖ್ಯೆಯ ಅಧಿಸೂಚನೆ.

(ಆ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 224–ಬಿ, 247–ಎ, 489, 489–ಬಿ ಮತ್ತು ಪರಿಶಿಷ್ಟ Iಕ್ಕೆ ತಿದ್ದುಪಡಿ ಮಾಡಿ ದಿನಾಂಕ 8.5.2006 ರಂದು ಹೊರಡಿಸಲಾದ ಎಫ್‌ಡಿ 6 ಎಸ್‌ಆರ್‌ಐ 2004ನೇ ಸಂಖ್ಯೆ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

(ಇ) ಸಾರ್ವಜನಿಕ ಹಿತದೃಷ್ಟಿಯಿಂದ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ನೊಂದಾಯಿಸಲ್ಪಟ್ಟ ಮೋಟಾರು ವಾಹನಗಳಿಗೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ದಿನಾಂಕ: 1.4.2005ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ: 27.5.2006 ರಂದು ಹೊರಡಿಸಲಾದ ಎಫ್‌ಡಿ 4 ಸಿಇಟಿ 2006 ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು: ಮಂಡಿಸಲಾಯಿತು.

4. ಅರ್ಜಿಗಳನ್ನೊಪಿಸುವುದು

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್: ಮಾನ್ಯ ಅಧ್ಯಕ್ಷರೆ, ಕೆಳಕಂಡ ಅರ್ಜಿಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

(1) ಹುಬ್ಬಳ್ಳಿಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಲಾಗುತ್ತಿರುವ ವಾಂಬೆ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗಿರುವ ಬಗ್ಗೆ.

(2) ಹಳೇ ಹುಬ್ಬಳ್ಳಿ ಬಡಾವಣೆಗಳಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಎಸ್.ಎಂ.ಕೃಷ್ಣ ನಗರದಲ್ಲಿರುವ ಪಾಲಿಕೆ ಜಾಗದಲ್ಲಿ ದೊಡ್ಡ ಪ್ರಮಾಣದ ನೀರಿನ ಟ್ಯಾಂಕನ್ನು ನಿರ್ಮಿಸುವ ಬಗ್ಗೆ.

ಅಧ್ಯಕ್ಷರು: ಮಂಡಿಸಲಾಯಿತು.

5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: (ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಮಕ್ಕಳು ಪ್ರವಾಹ ಹಾಗೂ ಕೆರೆಯಲ್ಲಿ ಜಲಸಮಾಧಿಯಾಗಿರುವ ಬಗ್ಗೆ.